**ಓ.ಎಸ್. ನಂ. 146/2022** **ಡಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 21.3.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ಶ್ರೀ ಜಿ.ವಿ.ಜಿ ವಕೀಲರಿಂದಃ</u>

ತತ್ಕಾಲ್ ಪೋಡಿಗೆ ನನ್ನ ತಾಯಿ ನೀಡಿರುವ ಅರ್ಜಿಗೆ ಸಂಬಂಧಿಸಿದಂತೆ ಸರ್ವೆಯರ್ ಸ್ಥಳಕ್ಕೆ ಬಂದು ಸರ್ಕಾರಕ್ಕೆ ಒಂದು ಹೇಳಿಕೆಯನ್ನು ಬರೆದು ಅದಕ್ಕೆ ನನ್ನ ತಾಯಿ, ಪಹಣಿದಾರರು ಮತ್ತು ಗ್ರಾಮಸ್ಥರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ತಾಯಿ ಸಹಿ ಮಾಡಿರುತ್ತಾರೆ, ಬೇರೆಯವರು ಸಹಿ ಮಾಡಿರುವುದಿಲ್ಲ ಎನ್ನುವರು. ಸದರಿ ಹೇಳಿಕೆಯಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನ್ನ ತಾಯಿಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ನನ್ನ ತಾಯಿ ಸರ್ವೆ ಇಲಾಖೆಗೆ ಅರ್ಜಿ ನೀಡಲು, ಸಾಲ ವಗೈರೆ ಪಡೆಯಲು ಮತ್ತು ಇತರ ವ್ಯವಹಾರಕ್ಕೆ ಊರಿನವರನ್ನು ಕರೆದುಕೊಂಡು ಹೋಗುತ್ತಾರೆ. ನನಗೆ ಹೋಗಲು ಸಾಧ್ಯವಾಗದಿದ್ದಾಗ ಊರಿನವರನ್ನು ಕರೆದುಕೊಂಡು ಹೋಗುತ್ತಾರೆ. ಊರಿನವರನ್ನು ಕರೆದುಕೊಂಡು ಹೋಗುವಾಗ ನನಗೆ, ನನ್ನ ಸಹೋದರ ಸಹೋರಿಯರಿಗೆ ಮಾಹಿತಿ ತಿಳಿಸಿ ಹೋಗುತ್ತಾರೆ ಎಂದರೆ ಸರಿ. ತತ್ಕಾಲ್ ಪೋಡಿಗೆ ಅರ್ಜಿ ನೀಡಿದಾಗ ನಾನು ಹೋಗಿರುವುದಿಲ್ಲ. ಅರ್ಜಿ ನೀಡುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸಾಕ್ಷಿದಾರರು ಮುಂದುವರಿದು ಆಸ್ತಿಯ ಅದಲು ಬದಲಾಗಿರುತ್ತದೆ ಎಂದು ನನ್ನ ತಾಯಿಯ ಸಹಿಯನ್ನು ಪಡೆದುಕೊಂಡಿರುತ್ತಾರೆ ಎನ್ನುವರು. ಸರ್ವೆಯರ್ ಸ್ಥಳಕ್ಕೆ ಬಂದಾಗ ಅದಲು ಬದಲಾಗಿರುವ ವಿಚಾರ ಮೊದಲ ಬಾರಿಗೆ ನಮಗೆ, 1 ರಿಂದ 3 ಮತ್ತು 7 ನೇ ಪ್ರತಿವಾದಿಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಸರ್ವೆಯರ್ ತತ್ಕಾಲ್ ಪೋಡಿಗೆ ಸಂಬಂಧಿಸಿದಂತೆ ಮೊದಲ ಬಾರಿಗೆ ಆಸ್ತಿಗೆ ಬಂದಿರುತ್ತಾರೆ ಎಂದರೆ ಸರಿ. ಆ ರೀತಿ ಅದಲು ಬದಲಾಗಿರುವ ವಿಚಾರ ಗೊತ್ತಾದ ನಂತರ ನನ್ನ ತಾಯಿ, 2 ಮತ್ತು 7 ನೇ ಪ್ರತಿವಾದಿಯರು ಡಿ.ಡಿ.ಎಲ್.ಆರ್ ರವರ ಮುಂದೆ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ತಾಯಿಗೆ ಗೊತ್ತಿಲ್ಲದಂತೆ ಕರೆದುಕೊಂಡು ಹೋಗಿ ಸಹಿ ಪಡೆದುಕೊಂಡಿರುತ್ತಾರೆ ಎನ್ನುವರು. ಮೇಲ್ಮನವಿ ಸಲ್ಲಿಸಿದ ನಂತರ ನನ್ನ ತಾಯಿಗೆ, 2 ಮತ್ತು 7 ನೇ ಪ್ರತಿವಾದಿಗೆ ಡಿ.ಡಿ.ಎಲ್.ಆರ್ ಕಛೇರಿಯಿಂದ ನೋಟಿಸ್ ಬಂದಿರುತ್ತದೆ ಎಂದರೆ ಸರಿಯಲ್ಲ. ಆ ರೀತಿ ನೋಟಿಸ್ ಬಂದ ನಂತರ ನನ್ನ ತಾಯಿ, 2 ಮತ್ತು 7 ನೇ ಪ್ರತಿವಾದಿಗಳು ವಿಸ್ತೀರ್ಣಕ್ಕೂ ಪಹಣಿಗೂ ಏರುಪೇರಾಗಿರುತ್ತದೆ, ಅದನ್ನು ಸರಿಪಡಿಸಿಕೊಡುವಂತೆ ಹೇಳಿಕೆ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ತಾಯಿ ಗೊತ್ತಿಲ್ಲದೆ ಸಹಿ ಮಾಡಿಕೊಟ್ಟಿರುತ್ತಾರೆ ಎನ್ನುವರು. ಹೇಳಿಕೆ ನೀಡುವ ಸಮಯದಲ್ಲಿ ನನ್ನ ತಾಯಿ ಡಿ.ಡಿ.ಎಲ್.ಆರ್ ರವರ ಮುಂದೆ ಹಾಜರಿದ್ದರು ಎಂದರೆ ಸಾಕ್ಷಿದಾರರು ಆಜುಬಾಜುದಾರರು ಕರೆದುಕೊಂಡು ಹೋಗಿರುತ್ತಾರೆ ಎನ್ನುವರು. ಡಿ.ಡಿ.ಎಲ್.ಆರ್ ರವರು ಆದೇಶ ಮಾಡುವ ಪೂರ್ವದಲ್ಲಿ ನನ್ನ ತಾಯಿ, 2 ಮತ್ತು 7 ನೇ ಪ್ರತಿವಾದಿಯನ್ನು ವಿಚಾರಣೆ ಮಾಡಿ ಆದೇಶ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಡಿ.ಡಿ.ಎಲ್.ಆರ್ ರವರ ಆದೇಶದ ನಂತರ ತಾಲ್ಲೂಕು

ಸರ್ವೆಯರ್ ರವರು ಆಸ್ತಿಯ ಅಳತೆ ಮಾಡಿ ದುರಸ್ತಿ ಮಾಡಿ ಪಹಣಿಯನ್ನು ಸರಿಪಡಿಸಿರುತ್ತಾರೆ ಎಂದರೆ ಸಾಕ್ಷಿದಾರರು ನಮ್ಮ ಗೈರುಹಾಜರಿಯಲ್ಲಿ ಅವರೇ ಮಾಡಿಸಿರುತ್ತಾರೆ ಎನ್ನುವರು. 2 ಮತ್ತು 7 ನೇ ಪ್ರತಿವಾದಿಯರು ನನ್ನ ತಾಯಿಗೆ ತಿಳಿಯದಂತೆ ಡಿ.ಡಿ.ಎಲ್.ಆರ್ ಕಛೇರಿಗೆ ಕರೆದುಕೊಂಡು ಹೋಗಿರುವ ಮಾಹಿತಿ ವಕೀಲರ ಮೂಲಕ ನೋಟಿಸ್ ನೀಡಿದಾಗ ಗೊತ್ತಾಗಿರುತ್ತದೆ. ಡಿ.ಡಿ.ಎಲ್.ಆರ್ ರವರ ಆದೇಶದ ಮೇಲೆ ಮೇಲ್ಮನವಿ ಸಲ್ಲಿಸಿರುವುದಿಲ್ಲ. ದುರಸ್ತಿ ಮಾಡಿದ ನಂತರ 2 ನೇ ಪ್ರತಿವಾದಿ ಹೆಸರಿಗೆ ಸರ್ವೆ ನಂ.20/1 ರಲ್ಲಿ 8-13 ಎಕರೆ, 7 ನೇ ಪ್ರತಿವಾದಿ ಹೆಸರಿಗೆ ಸರ್ವೆ ನಂ.20/2 ರಲ್ಲಿ 5-30 ಎಕರೆ, ನನ್ನ ತಾಯಿಯ ಹೆಸರಿಗೆ ಸರ್ವೆ ನಂ.30/3 ರಲ್ಲಿ 3-20 ಎಕರೆ ಜಮೀನನ್ನು ಪಹಣಿಯಲ್ಲಿ ಇಂಡೀಕರಣ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ನಮಗೆ ಮಾಹಿತಿ ಇಲ್ಲದೆ ಮಾಡಿರುತ್ತಾರೆ ಎನ್ನುವರು.

ನನ್ನ ತಂದೆಯ ದತ್ತು ತಂದೆಯು ದಿನಾಂಕ 3.7.1950 ರಲ್ಲಿ ಅವರು ಸ್ವಾಧೀನ ಹೊಂದಿರುವ ಸರ್ವೆ ನಂ.20 ರ 3-20 ಎಕರೆ ಜಮೀನನ್ನು ಮಾದೇಗೌಡ ಎಂಬುವವರಿಗೆ ನೋಂದಾಯಿತ ಬೋಗ್ಯ ಪತ್ರ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ನನ್ನ ತಂದೆಯ ದತ್ತು ತಂದೆ ಅವರು ಸ್ವಾಧೀನದಲ್ಲಿದ್ದ 3-20 ಎಕರೆ ಜಮೀನನ್ನು ಮಾತ್ರ ಅಮ್ಮಣ್ಣಮ್ಮ ಎಂಬುವವರಿಗೆ ದಿನಾಂಕ 11.7.1967 ರಲ್ಲಿ ನೋಂದಾಯಿತ ಬೋಗ್ಯ ಪತ್ರ ಮಾಡಿರುತ್ತಾರೆ ಎಂದರೆ ಸರಿ. ಆಗಿನಿಂದಲೂ ಸಹ ನನ್ನ ತಾತ ಸರ್ವೆ ನಂ.20 ರಲ್ಲಿ 3-20 ಎಕರೆ ಜಮೀನಿನಲ್ಲಿ ಮಾತ್ರ ಸ್ವಾಧೀನದಲ್ಲಿದ್ದು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿದಾರರು ಅಗಿನಿಂದಲೂ7 ಎಕರೆ ಜಮೀನಿನಲ್ಲಿ ಸ್ವಾಧೀನ ಹೊಂದಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇವೆ ಎನ್ನುವರು. ಮಾದೇಗೌಡರ ಹೆಸರಿಗೆ 1933 ರಲ್ಲಿ ಆಗಿರುವ ಕ್ರಯಪತ್ರವನ್ನು ನಾನು ಓದಿ ನೋಡಿರುವುದಿಲ್ಲ. ಸದರಿ ಕ್ರಯಪತ್ರದಲ್ಲಿ ಈ ಹಿಂದೆ ನಿಮಗೆ ಕ್ರಯಕ್ಕೆ ನೀಡಿರುವ ಪಶ್ಚಿಮ ಭಾಗದ 9 ಎಕರೆ ಜಾತ ಉಳಿಕೆ 8 ಎಕರೆ ಪೈಕಿ ನಿಮ್ಮ ಜಮೀನಿಗೆ ಸೇರಿದ ಹಾಗೆ ಪಶ್ಚಿಮ ಭಾಗದ ದಕ್ಷಿಣೋತ್ತರವಾಗಿ ನಾಲ್ಕುವರೆ ಎಕರೆ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ.

ಈ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತಿಳಿದುಕೊಂಡಿರುತ್ತೇನೆ. ದಾವಆಸ್ತಿಯ ಚಕ್ಕುಬಂದಿಯ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದಾವ ಎ ಷೆಡ್ಯೂಲಿನ 1 ನೇ ಐಟಂ ಆಸ್ತಿಗೆ ಸಂಬಂಧಪಟ್ಟಂತೆ ಏನು ಪರಿಹಾರ ಕೇಳಿರುತ್ತೀರಾ ಎಂದರೆ ಸಾಕ್ಷಿದಾರರು ಯಾವುದೇ ನೋಂದಾಯಿತ ದಾಖಲೆಯಾಗಿರುವುದಿಲ್ಲ, ಸದರಿ ಆಸ್ತಿ ನಮಗೆ ಸೇರಿರುತ್ತದೆ ಎಂದು ಪರಿಹಾರ ಕೇಳಿರುತ್ತೇನೆ ಎನ್ನುವರು. ದಾವ ಎ ಷೆಡ್ಯೂಲಿನ 2 ನೇ ಐಟಂ ಆಸ್ತಿಗೆ ಸಂಬಂಧಪಟ್ಟಂತೆ ಏನು ಪರಿಹಾರ ಕೇಳಿರುತ್ತೀರಾ ಎಂದರೆ ಸಾಕ್ಷಿದಾರರು ನನ್ನ ತಾತ ಯಾರಿಗೂ ನೊಂದಾಯಿತ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ ಎಂದು ಪರಿಹಾರ ಕೇಳಿರುತ್ತೇನೆ ಎನ್ನುವರು. ದಾವ ಬಿ ಷೆಡ್ಯೂಲಿನ 1 ನೇ ಐಟಂ ಆಸ್ತಿಗೆ ಸಂಬಂಧಪಟ್ಟಂತೆ ಏನು

ಪರಿಹಾರ ಕೇಳಿರುತ್ತೀರಾ ಎಂದರೆ ಸಾಕ್ಷಿದಾರರು 4-20 ಎಕರೆ ಜಮೀನಿಗೆ ಸಂಬಧಿಸಿದಂತೆ ನೋಂದಾಯಿತ ದಾಖಲೆಯಾಗಿದ್ದು ಉಳಿದ 1 ಎಕರೆ ಆಸ್ತಿಯನ್ನು ಬಿಟ್ಟುಕೊಡುವಂತೆ ಪರಿಹಾರ ಕೇಳಿರುತ್ತೇನೆ ಎನ್ನುವರು. ದಾವ ಎ ಷೆಡ್ಯೂಲಿನ 2 ನೇ ಐಟಂ ಆಸ್ತಿ 8-13 ಎಕರೆಯ ಪೂರ್ವ ದಿಕ್ಕಿನಲ್ಲಿ 5-20 ಎಕರೆ ಜಮೀನಿನ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸಾಕ್ಷಿದಾರರು ಅಷ್ಟು ಜಮೀನಿನಲ್ಲಿ ವ್ಯವಸಾಯ ಮಾಡುತ್ತಿಲ್ಲ, ಆದರೆ ಪೂರ್ವ ದಿಕ್ಕಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎನ್ನುವರು. ದಾವ ಬಿ ಷೆಡ್ಯೂಲಿನ 2 ನೇ ಐಟಂ ಆಸ್ತಿಗೆ ಸಂಬಂಧಪಟ್ಟಂತೆ ಏನು ಪರಿಹಾರ ಕೇಳಿರುತ್ತೀರಾ ಎಂದರೆ ಸಾಕ್ಷಿದಾರರು ಯಾವುದೇ ಪರಿಹಾರ ಕೇಳಿರುವುದಿಲ್ಲ ಎನ್ನುವರು. ದಾವ ಸಿ ಷೆಡ್ಯೂಲಿನ ಆಸ್ತಿಗೆ ಸಂಬಂಧಪಟ್ಟಂತೆ ಏನು ಪರಿಹಾರ ಕೇಳಿರುತ್ತೀರಾ ಎಂದರೆ ಸಾಕ್ಷಿದಾರರು ಅಷ್ಟು ಆಸ್ತಿಯಲ್ಲಿ ನಾವು ಸ್ವಾಧೀನದಲ್ಲಿರುತ್ತೇವೆ ಎಂದು ಪರಿಹಾರ ಕೇಳಿರುತ್ತೇವೆ ಎನ್ನುವರು. ಈ ದಾವೆಯಲ್ಲಿ ಒಟ್ಟಾಗಿ ಏನು ಪರಿಹಾರ ಕೇಳಿರುತ್ತೀರಿ ಎಂದರೆ ಸಾಕ್ಷಿದಾರರು ನನ್ನ ತಾತ ಕ್ರಯ ಮಾಡಿರುವ ಆಸ್ತಿಯನ್ನು ಹೊರತುಪಡಿಸಿ ಉಳಿದ ಆಸ್ತಿಯನ್ನು ಬಿಟ್ಟಕೊಡುವಂತೆ ಕೇಳಿರುತ್ತೇವೆ ಎನ್ನುವರು. ದಾವ ಸಿ ಷೆಡ್ಯೂಲ್ ಆಸ್ತಿಯಲ್ಲಿ ನನ್ನ ತಾತನ ಕಾಲದಿಂದಲೂ ಸ್ವಾಧೀನದಲ್ಲಿರುತ್ತೇವೆ. 2 ನೇ ಪ್ರತಿವಾದಿಯು 8-13 ಎಕರೆ ಜಮೀನಿನಲ್ಲಿ ಕಳೆದ 10-12 ವರ್ಷಗಳಿಂದ ಸ್ವಾಧೀನದಲ್ಲಿರುತ್ತಾರೆ, ಅದಕ್ಕಿಂತ ಪೂರ್ವದಲ್ಲಿ ಪಾಳು ಬಿದ್ದಿತ್ತು ಎನ್ನುವರು. ಪಾಳು ಬಿದ್ದಿದ್ದಾಗ ಸದರಿ ಜಮೀನು ಯಾರ ಜಮೀನು ಎಂದು ನಮಗೆ ಗೊತ್ತಿರಲಿಲ್ಲ. 10-12 ವರ್ಷಗಳ ಹಿಂದೆ 2 ನೇ ಪ್ರತಿವಾದಿಯು ಸದರಿ 8-13 ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡಲು ಪ್ರಾರಂಭಿಸಿದಾಗ ಏಕೆ ವ್ಯವಸಾಯ ಮಾಡುತ್ತಿದ್ದೀರಿ ಎಂದು ಪ್ರಶ್ನೆ ಮಾಡಿರುವುದಿಲ್ಲ.

ಚಾಮೇಗೌಡರ ಮಗ ಮಾದೇಗೌಡರಿಗೆ 7 ಜನ ಹೆಣ್ಣಮಕ್ಕಳಿದ್ದು ಗಂಡು ಮಕ್ಕಳಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಮಾದೇಗೌಡರು ತಮ್ಮ ಕೊನೆ ಮಗಳಾದ ಸಾವಿತ್ರಮ್ಮ ರವರನ್ನು ಚಂದ್ರಮೋಹನ್ ರವರಿಗೆ ಮದುವೆ ಮಾಡಿಕೊಟ್ಟು ಅವರನ್ನು ಮನೆ ಅಳಿಯನಾಗಿ ಮಾಡಿಕೊಂಡಿದ್ದರು ಎಂದರೆ ಸರಿ. ಮಾದೇಗೌಡರಿಗೆ ಸಂಬಂಧಪಟ್ಟ ಎಲ್ಲ ಆಸ್ತಿಗಳನ್ನು ಸದರಿ ಚಂದ್ರಮೋಹನ್ ರವರು ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ. 7 ನೇ ಪ್ರತಿವಾದಿ ಸದರಿ ಸಾವಿತ್ರಮ್ಮ ಮತ್ತು ಚಂದ್ರಮೋಹನ್ ರವರ ಮಗ ಎಂದರೆ ಸರಿ. ಮಾದೇಗೌಡರು 1974 ರಲ್ಲಿ ಅವರ ಮಕ್ಕಳ ಹೆಸರಿಗೆ ವಿಭಾಗಪತ್ರ ಮಾಡುವ ಪೂರ್ವದಲ್ಲಿ ಕೆಲವು ಆಸ್ತಿಗಳ ವ್ಯವಸಾಯಗಾರರ ಕಲಂ ನಲ್ಲಿ ಚಂದ್ರಮೋಹನ್ ರವರ ಹೆಸರು ನಮೂದಗಿತ್ತು ಎಂದರೆ ಸರಿ. ಅದೇ ರೀತಿ ನಿಪಿ17 ರಂತೆ ಸರ್ವೆ ನಂ.20/2 ರಲ್ಲಿ 5-30 ಎಕರೆ ಜಮೀನು ಮಾದೇಗೌಡರ ಹೆಸರಿನಲ್ಲಿ ನಮೂದಾಗಿತ್ತು ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಇತ್ತೀಚೆಗೆ ಗೊತ್ತಾಗಿರುತ್ತದೆ ಎನ್ನುವರು. ನಿಪಿ18 ಮತ್ತು 19 ರಂತೆ ಸರ್ವೆ ನಂ.20/2 ರಲ್ಲಿ 5-30 ಎಕರೆ ಜಮೀನು ವ್ಯವಸಾಯಗಾರರ ಕಲಂನಲ್ಲಿ ಚಂದ್ರಮೋಹನ್ ರವರ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ20 ಮತ್ತು 21 ರಂತೆ ಸರ್ವೆ ನಂ.20/2 ರಲ್ಲಿ 5-30 ಎಕರೆ ಜಮೀನು ವ್ಯವಸಾಯಗಾರರ ಕಲಂನಲ್ಲಿ ಸಾವಿತ್ರಮ್ಮ ರವರ ಹೆಸರು

ನಮೂದಾಗಿರುತ್ತದೆ ಎಂದರೆ ಸರಿ. ಯಾವುದೇ ವ್ಯಕ್ತಿಯು ಯಾವುದೇ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರೆ ಮಾತ್ರ ಪಹಣಿಯ ವ್ಯವಸಾಯಗಾರರ ಕಲಂನಲ್ಲಿ ಹೆಸರು ನಮೂದಾಗುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಮಾದೇಗೌಡರು 1974 ರಲ್ಲಿ ಅವರಿಗೆ ಸಂಬಂಧಪಟ್ಟ ಎಲ್ಲಾ ಆಸ್ತಿಗೆ ಸಂಬಂಧಿಸಿದಂತೆ 7 ಜನ ಮಕ್ಕಳಿಗೆ ವಿಭಾಗಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಈ ಹಿಂದೆ ಗಣಕೀಕೃತ ಪಹಣಿಗಳ ಇಲ್ಲದಿದ್ದುದರಿಂದ ಪಾಲಿಗೆ ಬಂದ ಆಸ್ತಿಗಳಿಗೆ ಅರ್ಜಿ ನೀಡಿ ಖಾತೆ ಮಾಡಿಸಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.